ಗ್ರಾಮಾಂತರ ಪ್ರದೇಶದಲ್ಲಿ ಕುಡಿಯುವ ನೀರಿನ ಟಿ.ಸಿ.ಗಳು ಸುಟ್ಟ ತಕ್ಷಣ ಬದಲಾಯಿಸಿ ಕೊಡುವುದು

89 (642) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ) (ತುರುವೇಕೆರೆ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಅಳವಡಿಸಿರುವ ಟಿ.ಸಿ.ಗಳು ಸುಟ್ಟು ಹೋದಲ್ಲಿ ಅದನ್ನು ದುರಸ್ಥಿ ಗೊಳಿಸಲು ಯಾವ ಕ್ರಮ ಕೈಗೊಳ್ಳಲಾಗುವುದು?

ಆ. ಕೆಟ್ಟು ಹೋದ ಟಿ.ಸಿ.ಗಳನ್ನು ಎಷ್ಟು ದಿವಸಗಳಲ್ಲಿ ಬದಲಾಯಿಸಲಾಗುವುದು?

ಇ. ಟಿ.ಸಿ.ಸುಟ್ಟಾಗ ಅದನ್ನು ದುರಸ್ಥಿಗೊಳಿಸದೆ ಅಧಿಕಾರಿಗಳು ನಿರ್ಲಕ್ಷ್ಯ ಮಾಡುತ್ತಿರುವುದರಿಂದ ಗ್ರಾಮಾಂತರ ಪ್ರದೇಶದ ವಿದ್ಯಾರ್ಥಿಗಳಿಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ. ಹಾಗಿದ್ದಲ್ಲಿ, ಈ ತೊಂದರೆಯನ್ನು ನಿವಾರಿಸಲು ಕೂಡಲೇ ಕ್ರಮಗೊಳ್ಳಲಾಗುವುದೇ?

ಶ್ರೀ ಬಸವರಾಜ್ ಹೆಚ್.ಪಾಟೀಲ್ (ಇಂಧನ ರಾಜ್ಯ ಸಚಿವರು)

ಆ ಮತ್ತು ಆ

ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿಗಾಗಿ ಅಳವಡಿಸಿರುವ ಟಿ.ಸಿ.ಗಳು ಸುಟ್ಟು ಹೋದಲ್ಲಿ ಮಾಹಿತಿ ಬಂದ ಒಂದರಿಂದ ಮೂರು ದಿನಗಳೊಳಗಾಗಿ ಬೇರೆ ಟಿ.ಸಿ.ಯನ್ನು ತಂದು ಅದರ ಸ್ಥಾನದಲ್ಲಿ ಸ್ಥಾಪಿಸಿ ನಂತರ ಸುಟ್ಟು ಹೋದ ಟಿ.ಸಿ.ಯನ್ನು ರಿಪೇರಿಗೆ ಕಳುಹಿಸಲಾಗುವುದು

ಇ ಮತ್ತು ಈ

ಕೆಲವೆಡೆ ಟ್ರಾನ್ಸ್ ಫಾರ್ಮರ್ ಲಭ್ಯತೆಯ ಅಭಾವದಿಂದ ಸ್ವಲ್ಪ ವಿಳಂಬವಾಗಿರುವ ಸಾಧ್ಯತೆ ಇರುತ್ತದೆ. ಅಧಿಕಾರಿಗಳ ನಿರ್ಲಕ್ಷ್ಯದ ನಿರ್ದಿಷ್ಟ ಪ್ರಕರಣಗಳು ಗಮನಕ್ಕೆ ಬಂದಲ್ಲಿ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು.

ಶಿವಮೊಗ್ಗ ಹೊನ್ನಾಳಿ ರಸ್ತೆಯಲ್ಲಿ ರೈಲ್ವೆ ಮೇಲು ಸೇತುವೆ ನಿರ್ಮಾಣ

144 (475) ಶ್ರೀ ಚಂದ್ರಶೇಖರಪ್ಪ.ಹೆಚ್.ಎಂ. (ಶಿವಮೊಗ್ಗ) : ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಿವಮೊಗ್ಗ-ಹೊನ್ನಾಳಿ ರಸ್ತೆಯಲ್ಲಿ ವಾನಹ ಸಂಚಾರಕ್ಕೆ ಸನುಕೂಲವಾಗುವಂತೆ ರೈಲ್ವೆ ಮೇಲು ಸೇತುವೆ ನಿರ್ಮಾಣ ಯೋಜನೆಗೆ ರಾಜ್ಯ ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ತಿಳಿಸುವುದು)?

ಶ್ರೀ ಟಿ.ಜಾನ್ (ಮಾನ್ಯ ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು)

ಅ. ಶಿವಮೊಗ್ಗ ನಗರ ವ್ಯಾಪ್ತಿಯ ಹೊಸಪೇಟೆ ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯ ಕಿ.ಮಿ.177.90 ರಲ್ಲಿ ಶಿವಮೊಗ್ಗ-ಹೊನ್ನಾಳಿ ರಸ್ತೆಯ ಲೆವಲ್ ಕ್ರಾಸಿಂಗ್ ಸಂಖ್ಯೆ 48 ರಲ್ಲಿ) ಮೇಲು ಸೇತುವೆ ನಿರ್ಮಾಣದ ಕುರಿತು ವಿನ್ಯಾಸಗಳನ್ನು ತಯಾರಿಸಲು ಮೆ.ಆರ್.ಐ.ಟಿ.ಇ.ಎಸ್.

(ರೈಟ್ಸ್)ಸಂಸ್ಥೆಗೆ ಸರ್ಕಾರದ ಮೂಲ ಸೌಲ್ಯಭ್ಯ ಅಭಿವೃದ್ಧಿ ಇಲಾಖೆಯಿಂದ ವಹಿಸಲಾಗಿದೆ. ಈ ಬಗ್ಗೆ ಮೆ.ರೈಟ್ಸ್‌ನವರು ಕೋರಿದ್ದು, ತಾಂತ್ರಿಕ ವಿವರಗಳನ್ನು ಲೋಕೋಪಯೋಗಿ ಇಲಾಖೆಯ ಶಿವಮೊಗ್ಗ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ನೇರವಾಗಿ ಮೆ.ರೈಟ್ಸ್ ರವರಿಗೆ ಸಲ್ಲಿಸಲಾಗಿದೆ. ಈ ಕಾಮಗಾರಿಯ ವಿವರವಾದ ನಕ್ಷೆ ಮತ್ತು ಇತರೆ ವಿವರಗಳನ್ನು ಮೆ.ರೈಟ್ಸ್ ಸಂಸ್ಥೆಯವರು ತಯಾರಿಸಿದ್ದು ಸಂಬಂಧಪಟ್ಟವರ ಅನುಮೋದನೆಗಾಗಿ ಕಳುಹಿಸಿದೆ.

ನಿವೃತ್ತಿಯಾದ ನೌಕರರ ಪುನರ್ ನೇಮಕ ತಡೆಗಟ್ಟುವುದು

162 (1553) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಿವೃತ್ತಿಯಾದ ನೌಕರರನ್ನು ಪುನರ್ ನೇಮಕ ಮಾಡಬಾರದೆಂಬ ನಿಯಮ ರಾಜ್ಯದಲ್ಲಿ ಜಾರಿಯಲ್ಲಿದೆಯೇ?

ಆ. ಈ ನಿಯಮ ಇರುವುದೇ ಆದಲ್ಲಿ ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯದಲ್ಲಿ ಹೆಚ್ಚುವರಿ ನಿರ್ದೇಶಕರಾಗಿ ಸೇವಾ ನಿವೃತ್ತರಾದ ಅಧಿಕಾರಿಗೆ ಪುನರ್ ನೇಮಕ ಮಾಡಿರುವುದು ನಿಜವೇ;

ಇ. ಹಾಗಿದ್ದಲ್ಲಿ, ಈ ಪುನರ್ ನೇಮಕ ಮಾಡಲು ಕಾರಣರಾದವರು ಯಾರು ಮತ್ತು ಅವರ ಮೇಲೆ ಜರುಗಿಸುವ ಕ್ರಮವೇನು; ಅಥವಾ ಕ್ರಮ ಜರುಗಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ. ಇಲ್ಲ

ವಾಸ್ತವವಾಗಿ ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡುವ ಅಧಿಕಾರವು ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ ನಿಯಮಗಳು, 1977ರ ನಿಯಮ 15 (1) (ಎ) ರನ್ವಯ ಸರ್ಕಾರಕ್ಕೆ ಪ್ರದತ್ತವಾಗಿದೆ.

ಆ. ಹೌದು

ಇ. ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರದ ನೌಕರರಿಗೆ ವಿ.ಆರ್.ಎಸ್. ಸ್ಕೀಂನ್ನು ಪ್ರಾರಂಭಿಸುವುದು

163 (1265)- ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲ ಹೊಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬ್ಯಾಂಕುಗಳಲ್ಲಿ ಇದ್ದಂತೆ ವಿ.ಆರ್.ಎಸ್.ಸ್ಕೀಮ್‌ನ್ನು ರಾಜ್ಯ ಸರ್ಕಾರದ ನೌಕರರಿಗೆ ಸಹ ಪ್ರಾರಂಭ ಮಾಡುವ ವಿಚಾರ ಸರ್ಕಾರದ ಮುಂದೆ ಇದೆಯೆ;

ಆ. ಹಾಗಿದ್ದಲ್ಲಿ ಅದು ಈಗ ಯಾವ ಹಂತದಲ್ಲಿದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಅ. ಇಲ್ಲ

ಆ. ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿಗೊಳಿಸುವ ವಿಷಯ ಇನ್ನೂ ಪರಿಶೀಲನೆಯಲ್ಲಿದೆ.